ಶ್ರೀ. ಪಿ.ಸಿ. ಸಿದ್ಧನಗೌಡರ್ : ನನ್ನದೂ ಒಂದು ಪ್ರಶ್ನೆ ಇತ್ತು.

ವೈಸ್ ಛೇರ್ಮನ್ : ಪ್ರಶ್ನೆಯನ್ನು ಕಳಿಸಿದ್ದೀರಿ, ಟೈಮ್ ಬೇಕು ಎಂದು ಕೇಳಿದ್ದಾರೆ.

ಶ್ರೀ ಪಿ.ಸಿ.ಸಿದ್ಧನಗೌಡರ್ : ಇವೊತ್ತು ಅಜೆಂಡಾದಲ್ಲಿ ಇದೆ.

ಶ್ರೀ ಬಿ. ಶಿವಣ್ಣ : ನಿನ್ನೆ ಮಾನ್ಯ ಅಧ್ಯಕ್ಷರಿಗೆ ಪತ್ರ ಬರೆದಿದ್ದೆ ಮತ್ತೆ ನಿಮಗೆ ಕಳಿಸಿಕೊಡುತ್ತೇನೆ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಆರ್. ಧರ್ಮಸಿಂಗ್ (ಗೃಹ ಸಚಿವರು):– (ಅರಣ್ಯ ರಾಜ್ಯ ಮಂತ್ರಿ ಅವರ ಪರವಾಗಿ):– ಮಾನ್ಯ ಅಧ್ಯಕ್ಷರೇ, "1956ನೇ ಇಸವಿಯ ಕಂಪನಿಗಳ ಶಾಸನದ 619 (ಎ) ಕಲಮಿನ ಮೇರೆಗೆ ಕರ್ನಾಟಕ ರಾಜ್ಯ ಅರಣ್ಯ ಕೈಗಾರಿಗಾ ನಿಗಮ ನಿಯಮಿತ, ಕರ್ನಾಟಕ ರಾಜ್ಯ ವೀವರ್ಸ್ ನಿಯಮಿತ ಹಾಗೂ ಮೈಸೂರು ಮ್ಯಾಚ್ ಕಂಪನಿ ನಿಯಮಿತಗಳ 14ನೇ ವಾರ್ಷಿಕ ವರದಿ ಹಾಗೂ 1986–87ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ವೈಸ್ ಛೇರ್ಮನ್ : ಮಂಡಿಸಲಾಯಿತು.

ವರದಿಯನ್ನೊಪ್ಪಿಸುವುದು

ಶ್ರೀ ಎಂ. ಪಿ. ವೆಂಕಟೇಶ್ (ಉಪಾಧ್ಯಕ್ಷರ ಪರವಾಗಿ) :– ಮಾನ್ಯ ಅಧ್ಯಕ್ಷರೆ ಖಾಸಗಿ ಸದಸ್ಯರ ವಿಧೇಯಕ ಹಾಗೂ ನಿರ್ಣಯಗಳ ಸಮಿತಿಯ ಆರನೆಯ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ವೈಸ್ ಛೇರ್ಮನ್ : ಒಪ್ಪಿಸಲಾಯಿತು.

(ಅರ್ಜಿಗಳನ್ನು ಒಪ್ಪಿಸುವುದು)

ಶ್ರೀ ರಂಗದೇವರಾಯಲು – (ಮಾನ್ಯ ಸದಸ್ಯರು ಗೈರು ಹಾಜರಿ)

ಶ್ರೀಮತಿ ಮೋಟಮ್ಮ : ಮಾನ್ಯ ಅಧ್ಯಕ್ಷರೇ, ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮಂಡಲದ ಸರ್ವೆ ನಂ.1 ರಲ್ಲಿನ ಜನರಿಗೆ ಮನೆ ನಿವೇಶನಗಳ ಮಂಜೂರಾತಿ ಬಗ್ಗೆ ಮತ್ತು ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ಮಂಡಲದ ಸರ್ವೆ ನಂಬರ್ 36ರಲ್ಲಿನ ಜಮೀನನ್ನು ಕೃಷಿಗಾಗಿ ಮಂಜೂರು ಮಾಡುವ ಬಗ್ಗೆ ಹಾಗೂ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕಿನ ಬೆಟ್ಟದ ಮನೆಯ ರಸ್ತೆಯ ದುರಸ್ತಿ ಬಗ್ಗೆ ಸಂಬಂಧಪಟ್ಟಂತೆ ಅರ್ಜಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೇ, ರಾಷ್ಟ್ರೀಯ ಹೆದ್ದಾರಿಗಳಲ್ಲಿರುವ ಹಳೆ ಸೇತುವೆಗಳಿಗೆ ದುರಸ್ತಿ ಮಾಡಿ ನೀರು ನಿಲ್ಲಿಸುವ ಬಗ್ಗೆ ಸಂಬಂಧಿಸಿದ ಅರ್ಜಿಯನ್ನು ಸಭೆಗೆ ಒಪ್ಪಿಸುತ್ತೇನೆ.

ವೈಸ್ ಛೇರ್ಮನ್ : ಅರ್ಜಿಗಳನ್ನು ಒಪ್ಪಿಸಲಾಯಿತು.

ಖಾಸಗಿ ಶಿಕ್ಷಣ ಸಂಸ್ಥೆಗಳ ವ್ಯವಸ್ಥಾಪಕ ಮಂಡಳಿಯವರು ಹೆಚ್ಚಿನ ತೇವಣಿಯನ್ನು ಸುಲಿಗೆ ಮಾಡುತ್ತಿರುವುದು

ಗಮನ ಸೆಳೆಯುವ ಸೂಚನೆಗಳು

ಶ್ರೀ ಎ.ಕೆ ಅನಂತಕೃಷ್ಣ :– ಮಾನ್ಯ ಅಧ್ಯಕ್ಷರೇ ನಾನು ಬೆಂಗಳೂರು ನಗರದ ಶಾಲೆಗಳು ಮತ್ತು ಕೆಲವು ಕಾಲೇಜು ವಿಷಯದಲ್ಲಿ ಹೇಳಬಯಸುತ್ತಿದ್ದೇನೆ. ನಮ್ಮ ಘನ ಸರ್ಕಾರಕ್ಕೆ ಬಹಳ ಕಾಲದಿಂದ ಗೊತ್ತಿದೆ. ಬೆಂಗಳೂರು ನಗರದಲ್ಲಿ ವಿದ್ಯಾರ್ಥಿಗಳು ಶಾಲೆಗಳಿಗೆ ಅಡ್ಮಿಷನ್‌ಗೆ ಹೋಗಬೇಕಾಗಿದ್ದರೆ ಎಷ್ಟು ಕಷ್ಟಪಡುತ್ತಿದ್ದಾರೆ ಎಂತ. ಈ ವಿಷಯವನ್ನು ಪದೇ ಪದೇ ನಾನು ಸರ್ಕಾರದ ಗಮನಕ್ಕೆ ತಂದು ಸಾಕಷ್ಟು ರೀತಿಯಲ್ಲಿ ತಿಳುವಳಿಕೆ ಕೊಟ್ಟಿದ್ದೆ. ಆದರೂ ಕೂಡ ಸರ್ಕಾರ ಯಾತಕ್ಕೆ ಈ ವಿಷಯದಲ್ಲಿ ಗಮನ ಕೊಡುತ್ತಿಲ್ಲ ಎಂದು ಅರ್ಥ ಆಗುತ್ತಿಲ್ಲ.

ನಾನು ಹೇಳಬೇಕಾಗಿದ್ದರೆ ಇದರಲ್ಲಿ ಇಂಗ್ಲೀಷ್ ಮಾಧ್ಯಮಿಕ ಶಾಲೆಗಳು ಏನು ಇವೆ, ಈ ಇಂಗ್ಲೀಷ್ ಮಾಧ್ಯಮಿಕ ಶಾಲೆಗಳನ್ನು ಆಂಗ್ಲೋ ಇಂಡಿಯನ್ ಸ್ಕೂಲ್‌ಗಳೆಂದು ಹೇಳುತ್ತಾರೆ. ಈ ಶಾಲೆಗಳಲ್ಲಿ ಸಾಧಾರಣವಾಗಿ ಮಕ್ಕಳಿಗೆ ಯಾವ ಕಾಲದಲ್ಲಿಯೂ ಅಡ್ಮಿಷನ್ ಸಿಕ್ಕುವುದು ಬಹಳ ಕಷ್ಟ. ಈ ಅಡ್ಮಿಷನ್ ಸಿಗುವುದಿಲ್ಲ ಎಂದು ಎಲ್ಲರಿಗೂ ಗೊತ್ತಿದೆ. ಇದು ಯಾರಿಗೆ ಸಿಗುತ್ತದೆ ಎಂದರೆ ಯಾರು ಕನ್ನಡೇತರರು ಇರುತ್ತಾರೆ ಅವರಿಗೆ ಸಿಗುತ್ತದೆ.

ಇಲ್ಲಿ ಅಡ್ಮಿಶನ್ ಯಾರಿಗೆ ಸಿಗಬೇಕು ಅಂದರೆ, ಯಾರು ಕನ್ನಡೇತರರು ಇದ್ದಾರೆ, ಯಾರು ಕರ್ನಾಟಕದವರು ಅಲ್ಲ, ಯಾರು ಹೊರ ರಾಷ್ಟ್ರಗಳಿಂದ ಇಲ್ಲಿ ಮಕ್ಕಳನ್ನು ವಿದ್ಯಾಭ್ಯಾಸಕ್ಕೆ ಕಳುಹಿಸಬೇಕೆಂದು ಪ್ರಯತ್ನ ಮಾಡುತ್ತಾ ಇದ್ದಾರೆ, ಮತ್ತು ಯಾರು ನಾನ್ ರೆಸಿಡೆಂಟಲ್ ಇಂಡಿಯನ್ಸ್ ಇದ್ದಾರೆ, ಅಂತಹವರಿಂದ ಹೆಚ್ಚಾಗಿ ಡೊನೇಶನ್ ಪಡೆದು ಅಡ್ಮಿಶನ್ ಕೊಡುತ್ತಾರೆ. ಈ ಡೊನೇಶನ್‌ನನ್ನು ಸಾಧಾರಣವಾಗಿ ವಾಲಂಟಿಯರ್ ಆಗಿ ಡೋನರ್ ಯಾರು ಇರುತ್ತಾರೆ ಅವರು ಕೊಡುತ್ತಾರೆ. ಆದರೆ ಇದು ಎಕ್ಸ್‌ಟ್ರಾಕ್ಷನ್, ಇದು ಡೊನೇಶನ್ ಎಂದು ಹೇಳುವುದಕ್ಕಾಗುವುದಿಲ್ಲ. ಇದನ್ನು ನಾನಾ ವಿಧದಲ್ಲಿ ತೆಗೆದುಕೊಳ್ಳುತ್ತಾರೆ. ಅದಕ್ಕೆ ಪರೋಕ್ಷವಾಗಿ ನಮ್ಮ ಸರಕಾರದ ಒಂದು ವಿದ್ಯಾಭ್ಯಾಸದ ಇಲಾಖೆಯ ಅಧಿಕಾರಿಗಳಿಂದ ಸಾಕಷ್ಟು ಪ್ರೋತ್ಸಾಹ ಸಿಗುತ್ತಾ ಇದೆ. ಅದಕ್ಕೆ ಕಾರಣ ವಿದ್ಯಾಇಲಾಖೆಯಲ್ಲಿರುವ ಅಧಿಕಾರಿ ವರ್ಗದವರು ಹೇಳಿದ್ದಾರೆ.

ಶ್ರೀ ಧರ್ಮಸಿಂಗ್ ನಾರಾಯಣ ಸಿಂಗ್ :– ಮಾನ್ಯ ಅಧ್ಯಕ್ಷರೇ, ಮಾನ್ಯ ಶಿಕ್ಷಣ ಸಚಿವರು ಬಿಎಸಿ ಯಲ್ಲಿ ಇದ್ದಾರೆ. ಮಾನ್ಯ ಅನಂತಕೃಷ್ಣರವರು ಎತ್ತಿರತಕ್ಕಂಥ ವಿಚಾರವು ಬಹಳ ಗಂಭೀರವಾದುದು ಮತ್ತು ಪಾಲಿಸಿ ಮ್ಯಾಟರ್ ಆಗಿರುತ್ತದೆ. ಅದಕ್ಕೆ ಮಾನ್ಯ ಶಿಕ್ಷಣ ಸಚಿವರು ಇದ್ದರೆ ಒಳ್ಳೆಯದು ಎಂದು ನಾನು ಭಾವಿಸುತ್ತೇನೆ. ಆದುದರಿಂದ ಸಚಿವರು ಬಂದ ನಂತರ ಅವರು ಈ ಪ್ರಸ್ತಾಪವನ್ನು ಇಡುವುದು ಒಳ್ಳೆಯದು ಎಂದು ನಾನು ಅಂದುಕೊಂಡಿದ್ದೇನೆ.

ಉಪಾಧ್ಯಕ್ಷರು :– ಮಾನ್ಯ ಶಿಕ್ಷಣ ಸಚಿವರು ಬಂದ ಮೇಲೆ ತಾವುಗಳು ಈ ವಿಚಾರವನ್ನು ಪ್ರಸ್ತಾಪ ಮಾಡಿ.

ಶ್ರೀ ಎ.ಕೆ. ಅನಂತಕೃಷ್ಣ : ಸಭೆ ಏಳುವುದಕ್ಕಿಂತ ಮುಂಚೆ ನನಗೆ ತಾವುಗಳು ಅವಕಾಶ ಮಾಡಿಕೊಡಬೇಕು.
ಉಪಾಧ್ಯಕ್ಷರು : ಆಯಿತು, ಅವಕಾಶ ಮಾಡಿಕೊಡುತ್ತೇನೆ ಈಗ ಸುಭಾಶ್ ಜೋಶಿಯವರು ಮಾತನಾಡಿ.....

ಶ್ರೀ ಎಲ್.ಆರ್. ಶಿವರಾಮೇಗೌಡ :– ಮಾನ್ಯ ಅಧ್ಯಕ್ಷರೆ, ದೂರವಾಣಿ ಸಂಪಿನ ಬಗ್ಗೆ ಅದರ ಪರಿಣಾಮದ ಬಗ್ಗೆ ನಾನು ಒಂದು ವಿಚಾರವನ್ನು ಪ್ರಸ್ತಾಪಿಸಬೇಕೆಂದಿದ್ದೇನೆ; ಅವಕಾಶ ಕೊಡಿ.

(ಗೊಂದಲ)

ಶ್ರೀ ಎಲ್.ಆರ್. ಶಿವರಾಮೇಗೌಡ : ನಾನು ಬರೆದುಕಳುಹಿಸಿದ್ದೇನೆ. ನನಗೆ ಮಾತನಾಡಲು ಅವಕಾಶ ಕೊಡಿ....ದೂರವಾಣಿ ಸಂಪು ಪ್ರಾರಂಭವಾಗಿ 16 ದಿವಸಗಳು ಆದರೂ ಕೂಡ ವಿಧಾನಸೌಧದಲ್ಲಿ ಫೋನ್‌ವ್ಯವಸ್ಥೆ ಕೆಟ್ಟುಹೋಗಿ ಭಾರೀ ತೊಂದರೆಯಾಗಿದೆ, ಕೆಲಸ ಕಾರ್ಯಗಳು ಸರಿಯಾಗಿ ನಡೆಯುವುದಕ್ಕೆ ವ್ಯತ್ಯಯವಾಗಿದೆ.....

ಉಪಾಧ್ಯಕ್ಷರು :– ದಯಮಾಡಿ ತಾವುಗಳು ಕುಳಿತುಕೊಳ್ಳಿ. ನಾನು ಮಾನ್ಯ ಸುಭಾಶ್ ಜೋಶಿಯವರನ್ನು ಕರೆದಿದ್ದೇನೆ....

(ಗೊಂದಲ)

ಉಪಾಧ್ಯಕ್ಷರು : ಈಗ ನಿಯಮ 334ರ ಮೇರೆಗೆ ಪ್ರಸ್ತಾಪ.

ಶ್ರೀ ಜಿ. ರಾಜುಗೌಡ	:	ಗೈರು ಹಾಜರಿ
ಶ್ರೀಮತಿ ಮನೋರಮ ಮದ್ವರಾಜ್	:	ಗೈರು ಹಾಜರಿ
ಶ್ರೀ ರಾಮಸ್ವಾಮಿ	:	ಗೈರು ಹಾಜರಿ

ಶ್ರೀ ಡಿ.ಎ.ಚೆನ್ನಪ್ಪ:– ಸಭಾಧ್ಯಕ್ಷರೇ....